ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸ॰1909–10ನೆ ಇಸವಿ ಮಿ|| ಅರ್ಜಿ॰ ನಂಬರ್ 313.

ಮೈಸೂರು ಡಿಸ್ಟ್ರಿಕ್ಟ್ ಗುಂಡ್ಲಪೇಟೆಲಿದ್ದ ಮೃತಪಟ್ಟ ನರಹರಿ ಲಕ್ಷ್ಮಣ ಜೋಷಿರ ಆಸ್ತಿ ವಿಷಯದಲ್ಲಿ—

ಅರ್ಜಿದಾರರು ದತ್ತಾತ್ರಯನರಹರಿ ಜೋಷಿ, ಗೋಪಾಲನರಹರಿ ಜೋಷಿ, ಮೃತಪಟ್ಟ ಸದರಿ ನರಹರಿ ಲಕ್ಷ್ಮಣ ಜೋಷಿರಿಗೆ ಮುಖ್ಯವಾರಸದಾರರು ಆಗಬೇಕೆಂಬ ಹಕ್ಕುದಾರಿನೇಲೆ ಗುಂಡ್ಲಪೇಟೆ ಸ್ಥಳದ ವಾಸಸ್ಥರಾಗಿ ಮೃತಪಟ್ಟ ನರಹರಿಲಕ್ಷ್ಮಣ ಜೋಷಿರ ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ (200—0—0) ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಥಾರನಾರದಲ್ಲಿರುವ 1ನೆ ನರಹರಿಲಕ್ಷ್ಮಣಜೋಷಿ ಮಗ ದತ್ತಾತ್ರಯನರಹರಿ ಜೋಷಿ, 2ನೆ ಗೋಪಾಲನರಹರಿ ಜೋಷಿ ಯವರ ಅರ್ಜಿಯನ್ನು ಸ॰ 1909ನೆ ಇಸವಿ ಡಿಸೆಂಬರು ತಿಂಗಳು ತಾರೀಖು 17ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನರಹರಿ ಲಕ್ಷ್ಮಣಜೋಷಿರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ॰ 1909ನೆ ಇಸವಿ ನವಂಬರ್ ತಿಂಗಳು 30ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಬಿ. ನಾಗಪ್ಪ, ಸಬ್ ಜಡ್ಜ್.

ಮೈಸೂರು ಸಬಾರ್ಡಿನೇಟ್ ಜಡ್ಜ್‌ರವರ ಕೋರ್ಟಿನಲ್ಲಿ

ಮೈಸೂರು ಚಾಮರಾಜಪೇಟೆಲಿರುವ ದಿವಾಳಿಯಾದ ಡಿಕ್ರೀ ದೇಣೀದಾರ ಬಿ. ಸೇತೂರಾಮೈಯ್ಯಂಗಾರ್ರಂಬುವರ

ವಿಷಯದಲ್ಲಿ.

ಸ॰ 1907—08ನೆ ಇಸವಿ ದಿವಾಳಿ ವ್ಯಾಜ್ಯದ ನಂಬರು 212.

ಹುಕ್ಕುಂ.

ಮೇಲ್ಕಂಡ ಬಿ ಸೇತೂರಾಮೈಯ್ಯಂಗಾರ್ರು ನಿರ್ಬಂಧದಿಂದ ಖುಲಾಸೆ ಮಾಡಿಸಬೇಕೆಂದು ಬರದುಕೊಂಡ ಅರ್ಜಿಯು ಅಂಶವು ಈ ಕೋರ್ಟು ರೂಬರೂಬ್ ದಿವಾಳಿಯಾದವನ ಗೈರು ಹಾಜರಿಯಲ್ಲಿ ಈ ಕೆಳಗೆ ನಮೂದಾದ ಸರ್ಜ ದಿವಾಳಿಯಾದವನ ಲೇಣೇದಾರರಾದ ಈ ಕೋರ್ಟು 1907—10ನೆ ಮಿಸಲೇನಿಯಸ್ 79ನೆ ನಂಬರು ಆರ್ಡರು ಮೇರಿಗೆ ಕರಿಸಲ್ಪಟ್ಟು ಈ ಮೊಕದ್ದಮಾ 1ನೆ ಕ್ರಿಡಿಟರ್ ತಿರುಮಲೈಯ್ಯಂಗಾರ್ ಮತ್ತು ದೊರಸಾವೈಯ್ಯಂಗಾರ್ ವೈನರ್‌ಗಳು, ಗಾರ್ಡಿಯರ್ ಬೆಂಗಳೂರಲ್ಲಿರುವ ಅಡ್ವೊಕೇಟ್ ಮಿ|| ಬಿ. ಶ್ರೀನಿವಾಸೈಯಂಗಾರ್ರ ತರಫ್ ಮಿ|| ಎಂ. ಸಿ. ರಂಗೈಯಂಗಾರ್ರವರ ಎದುರಿಗೂ ಸಹ ದರ್ಯಾಫ್ತು ಮಾಡಲ್ಪಟ್ಟಿತು.

ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡವರು ಅವರ ಹೆಸರುಗಳಿಗೆ ಎದುರಾಗಿ ದಾಖಲಾಗಿರುವ ಸಾಲದ ವೊಬಲಗುಗಳಿಗೆ ಲೇಣೇದಾರರೆಂದು ರುಜು ಮಾಡಿದಾರೆಂದು ಇದರಿಂದ ನಿಶ್ಚಯಿಸಿ ತೀರ್ಮಾನ ಮಾಡಲ್ಪಟ್ಟಿರುತ್ತದೆ.

ನಂಬರ್	ಲೇಣೇದಾರ್ರ ಹೆಸರು ವಿವರ ಮತ್ತು ವಾಸಸ್ಥಳ.	ಸಾಲವೆಂದು ರುಜುವಾದ ವೊಬಲಗು.	ಸಾಲಗಳ ಸ್ವಭಾವ, ಪ್ರತಿಫಲ ಮತ್ತು (ವಿನಾದರು) ಈಡು.
1	ಲೇಟ್ ಥಾರಸ್ಟ್ ಇಲಾಖಾ ಅಕೌಂಟೆಂಟ್ ಅನಂತರಾವೆಯ್ಯಂಗಾರ್ರ ಮಕ್ಕಳು 1. ತಿರುಮಲೈಯ್ಯಂಗಾರ್ರು, 2. ದೊರೆಸಾವೆಯ್ಯಂಗಾರ್ರು ವೈನರ್‌ಗಳು, ಗಾರ್ಡಿಯರ್ ಬೆಂಗಳೂರಲ್ಲಿರುವ ಅಡ್ವೊಕೇಟ್ ಮಿ|| ಬಿ. ಶ್ರೀನಿವಾಸೈಯ್ಯಂಗಾರ್ರು.	ರೂ. ಆ. ಪೈ. 493 11 10	ಬೆಂಗಳೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟು 1905—06ನೆ ಸಿವಿಲ್ 990ನೆ ನಂಬರು ಡಿಕ್ರಿ ವೊಬಲಗು ಮತ್ತು ಜಾರಿ ಖರ್ಚು ದೇಖೀಲು.

ಸ॰ 1909ನೆ ಇಸವಿ ಅಕ್ಟೋಬರ್ ತಾರೀಖು 19ರಲ್ಲು ಕೋರ್ಟು ಮೊಹರ್ ನಮ್ಮ ದಸ್ತಖತ್ ನಿಸಿ ಕೊಡಲ್ಪಟ್ಟಿದೆ.

ಬಿ. ಎಸ್. ಕೃಷ್ಣಸ್ವಾಮಿ ಐಯ್ಯಂಗಾರ್,
ಸಬ್ ಜಡ್ಜ್.

ಮೈಸೂರು ಗವರ್ನಮೆಂಟ್ ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್‌ರವರ ಆಫೀಸಿನಿಂದ.

ವೊಕ್ಕುಂ ಬೆಂಗಳೂರು, ತಾರೀಖು 2–3ನೆ ಡಿಸೆಂಬರ್ 1909.

ನೋಟಿಫಿಕೇಷ್ ನಂಬರ್ 669—C. S. 14.

ಇದರಿಂದ ಕೋ ಆಪರೇಟಿವ್ ಸೊಸೈಟಿಗಳ ಮೆಂಬರುಗಳಿಗೆ ತಿಳಿಯಪಡಿಸುವುದೇನೆಂದರೆ:—ಮೈಸೂರು ಗವರ್ನಮೆಂಟಿನವರು 1905ನೆ ಇಸವಿ 111ನೆ ಕಾನೂನಿನ ಪ್ರಕಾರ ರಿಜಿಸ್ಟ್ರಾರಾದ ಕೋ ಆಪರೇಟಿವ್ ಸೊಸೈಟಿಗಳು ತಮ್ಮೊಳಗೆ ರಿಮಿಟೆನ್ಸ್ ಟ್ರಾನ್ಸ್‌ಫರ್ ರಸೀದಿಗಳ ಮೂಲಕ ರುಸುಂ ಕೊಡದೆ ವೊಬಲಗನ್ನು ಒಂದು ಸೊಸೈಟಿಯಿಂದ ಮತ್ತೊಂದು ಸೊಸೈಟಿಗೆ ಕಳುಹಿಸಬಹುದೆಂದು ಮೈಸೂರು ಗವರ್ನಮೆಂಟಿನವರು 10—11—1909ನೆ ನಂಬ್ರಂ Fl. 2293–302—G1-Fin 146-09-2ನೆ ನಂಬರು ಆರ್ಡರಿನಲ್ಲಿ ಅಪ್ಪಣೆ ದಯಪಾಲಿಸಿರುತ್ತಾರೆ.

ಎಂ. ಶ್ಯಾಮರಾವ್,
ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್.